# ಲೇಖಕನಾಗಬಯಸಿ ನಿರ್ದೇಶಕನಾಗಿ ಬಂದೆ



**ಸಿಂಪಲ್ ಸುನಿ**
**ಉದಯದ 'ಶಾಂಭವಿ' ನಿರ್ದೇಶಕ**

◆ **ಸಿಂಪಲ್ ಸುನಿ ಹೆಸರಿನ ವಿಶಿಷ್ಟತೆ ಏನು?**

ನನ್ನ ಹೆಸರು ಸುನೀಲ್ ಕುಮಾರ್. ಮನೆಯಲ್ಲಿ, ಆತ್ಮೀಯ ಗೆಳೆಯರು 'ಸುನಿ' ಎಂದು ಕರೆಯುತ್ತಿದ್ದರು. ಹಾಗಾಗಿ ಇದೇ ಹೆಸರಿನಲ್ಲಿ ಫೇಸ್‌ಬುಕ್ ಅಕೌಂಟ್ ಮಾಡಿದ್ದೆ. 'ಸಿಂಪಲ್ಲಾಗೊಂದು ಲವ್ ಸ್ಟೋರಿ' ನಿರ್ದೇಶನದ ನಂತರ ನನ್ನನ್ನು ಸಿಂಪಲ್ ಸುನಿ ಎಂದು ಗುರುತಿಸುತ್ತಿದ್ದಾರೆ. ಈಗಲೂ ನಾನು ಮಾತ್ರ ಸುನಿ ಎಂದಷ್ಟೇ ಬರೆಯುತ್ತೇನೆ.

◆ **ಲ್ಯಾಬ್‌ನಲ್ಲಿ ಇರಬೇಕಾದ ನೀವು ಕ್ಯಾಮೆರಾ ಹಿಂದೆ ನಿಂತಿದ್ದು ಹೇಗೆ?**

ಬಯೊಟೆಕ್ನಾಲಜಿ ಎನ್ನುವ ಒಂದು ಅಧ್ಯಯನ ವಿಷಯ ಇದೆ ಎನ್ನುವುದೇ ನನಗೆ ಗೊತ್ತಿರಲಿಲ್ಲ. ವಿಜ್ಞಾನದಲ್ಲಿ ಪಿಯು ಮುಗಿಸಿದ್ದರಿಂದ ನಮ್ಮ ಪೋಷಕರು ಬಿಎಸ್‌ಸಿ ಬಯೊಟೆಕ್ನಾಲಜಿಗೆ ಸೇರಿಸಿದರು. ನಾನು ಬೆಂಗಳೂರಿನ ರಾಜಾಜಿನಗರದ ಕೆಎಲ್‌ಇ ಕಾಲೇಜಿನಲ್ಲಿ ಓದಿದ್ದು. ಆಗ ತರಗತಿಗಿಂತ ನವರಂಗ ಚಿತ್ರಮಂದಿರಕ್ಕೆ ಹೆಚ್ಚು ಹಾಜರಾತಿ ಹಾಕಿದ್ದೇನೆ. ಚಿಕ್ಕಂದಿನಿಂದಲೂ ಬರೆಯುವ ಹವ್ಯಾಸ ಇತ್ತು. ಬೇರೆ ಬೇರೆ ಹಾಡುಗಳಿಗೆ ನನ್ನದೇ ಸಾಹಿತ್ಯ ರೂಪಿಸುತ್ತಿದ್ದೆ. ಸಿನಿಮಾ–ಟೀವಿ ಅನ್ನುವುದಕ್ಕಿಂತ ನಾನು ಹಾಡು ಬರೆಯುವ ಕನಸು ಹೊತ್ತು ಈ ಕಡೆ ಬಂದೆ. ದಿನೇಶ್‌ಬಾಬು ಅವರು 'ನಂದಾ' ಸಿನಿಮಾ ಮಾಡುತ್ತಿದ್ದರು. ನಾನು ಆಗ 4ನೇ ಸೆಮಿಸ್ಟರ್‌ನಲ್ಲಿ ಓದುತ್ತಿದ್ದೆ. ಕ್ಯಾಮೆರಾಮನ್ ಒಬ್ಬರ ಮೂಲಕ ಅವರ ಪರಿಚಯ ಆಯಿತು. ನನ್ನ ಕೋರಿಕೆಗೆ ಸ್ಪಂದಿಸಿದ ಅವರು ಕೆಲಸ ಕೊಟ್ಟರು. ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡುತ್ತಾ 5–6ನೇ ಸೆಮಿಸ್ಟರ್ ಓದಿದೆ. ಇದಕ್ಕಾಗಿ ತರಬೇತಿಯನ್ನು ಪಡೆದಿರಲಿಲ್ಲ. ನಿರ್ದೇಶಕ ಆಗಬೇಕು ಎಂದೂ ಅಂದುಕೊಂಡಿರಲಿಲ್ಲ. ಲೇಖಕನಾಗ ಬಯಸಿ ಬಂದವನು ನಿರ್ದೇಶಕನಾಗಿ ಹೊರಹೊಮ್ಮಿದ್ದೇನೆ.

◆ **ಕ್ಯಾಮೆರಾ ಮುಂದೆ ಬರುವ ಯತ್ನ ಏಕೆ ಮಾಡಲಿಲ್ಲ?**

ಮೂಲತಃ ಲೇಖಕನಾಗಿದ್ದರಿಂದ ನಟನೆಯ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಈಗ ಕ್ಯಾಮೆರಾ ಹಿಂದೆ ಒಗ್ಗಿದ್ದೇನೆ. ಮತ್ತೆ ಮುಂದೆ ಬರುವ ಪ್ರಯತ್ನವನ್ನು ಮಾಡುವುದಿಲ್ಲ. ಆಕಸ್ಮಿಕ ಅಂತಹ ಸಂದರ್ಭಗಳು ಬಂದರೆ, ಬಂದು ಹೋಗಬಹುದೇ ವಿನಃ ಅದುವೇ ನನ್ನ ಮಾಧ್ಯಮ ಆಗಲಾರದು. ನಿರ್ದೇಶನದಲ್ಲಿಯೇ ಬಿಜಿ ಇದ್ದೇನೆ. ಒಂದು ಮುಗಿಯುವಷ್ಟರಲ್ಲಿ ಮತ್ತೊಂದು ಕಾದಿರುತ್ತದೆ. ಇದರ ಜೊತೆಗೆ 'ಒಂದು ಸರಳ ಪ್ರೇಮ ಕಥೆ' ಸಿನಿಮಾ ಮಾಡುತ್ತಿದ್ದೇನೆ. 'ಸಖತ್'ನಲ್ಲಿ ಒಮ್ಮೆ ಕ್ಯಾಮೆರಾ ಎದುರಿಸಿದ್ದೇನೆ. ಸಂಜೆ ಆಗುವ ಹೊತ್ತು ಪ್ಯಾಕಪ್ ಆಗಲು ಒಂದು ಗಂಟೆ ಇತ್ತು. ನಿರ್ಮಾಪಕರು ಒಂದು ಶಾಟ್ ಮಾಡಬೇಕಿತ್ತು. ಅದು ಆಗಲಿಲ್ಲ. ಅನಿವಾರ್ಯವಾಗಿ ನಾನೇ ಮಾಡಿದೆ. ಯಾವತ್ತೋ ಒಂದು ಸಣ್ಣ ಪುಟ್ಟ ಪಾತ್ರ ಮಾಡಬಹುದು. ಅದಕ್ಕಾಗಿ ದಿನಗಳನ್ನು ಕೊಡಲು ಆಗುವುದಿಲ್ಲ.

◆ **ಧಾರಾವಾಹಿಯ ಕಥೆಯನ್ನು ವಿಸ್ತರಿಸಲು ಬಳಸುವ ತಂತ್ರಗಳು ಏನು?**

'ಶಾಂಭವಿ' ನನ್ನ ಕಥೆಯಲ್ಲ. ಬೇರೆಯವರ ಕಥೆಗೆ ದೃಶ್ಯರೂಪ ನೀಡುವ ಜವಾಬ್ದಾರಿ ನನ್ನದು. ಹಾಗಾಗಿ ನಾನು ಇದರಲ್ಲಿ ಹೆಚ್ಚು ಭಾಗಿಯಾಗುವುದಿಲ್ಲ. ಮೊದಲು 60 ಎಪಿಸೋಡ್ ಕಥೆಯ ಭಾಗವನ್ನು ಓದಲು ಕೊಟ್ಟಿದ್ದರು. ಓದಿದಾಗ ಇದು ಅದ್ದೂರಿ ಸಿನಿಮಾದ ರೀತಿಯಲ್ಲೇ ಇದೆಯಲ್ಲ ಎಂದು ಅಚ್ಚರಿಯಾಯಿತು. ಪ್ರತಿ ಕಂತಿನಲ್ಲೂ ಕುತೂಹಲದ ಘಟ್ಟಗಳಿದ್ದವು. ದೇವತೆಯ ಚಿತ್ರಣ, ಅದಕ್ಕೆ ಪೂರಕ ಗ್ರಾಫಿಕ್ ದುಬಾರಿ ಮತ್ತು ರೋಚಕ ಅನ್ನಿಸಿತ್ತು. ಸಿನಿಮಾದಲ್ಲಿ ನಾಯಕನನ್ನು ಕೇಂದ್ರೀಕರಿಸಿ ಕಥೆ ಇರುತ್ತದೆ. ಇಲ್ಲಿ ಪ್ರತಿ ಪಾತ್ರಕ್ಕೂ ಒಂದು ಕಥೆ ಇರುತ್ತದೆ. ಸಾಮಾನ್ಯವಾಗಿ ಲೇಖಕರು ಐದಾರು ಪಾತ್ರಗಳ ಹಿನ್ನೆಲೆಯಲ್ಲಿ ಉಪಕಥೆಗಳನ್ನು ರೂಪಿಸಿರುತ್ತಾರೆ. ಜನ ಏನು ಇಷ್ಟಪಡ್ತಾರೆ ಎನ್ನುವುದನ್ನು ಗಮನಿಸಿ ಆ ಭಾಗ ಹೆಚ್ಚು ಬೆಳೆಯುತ್ತದೆ. ನನಗೆ ಇದು ಮೊದಲ ಧಾರಾವಾಹಿ. ಒಟ್ಟಾರೆ ಎಲ್ಲದಕ್ಕೂ ಟಿಆರ್‌ಪಿ ಕೂಡ ಕಾರಣವಾಗುತ್ತದೆ.

◆ **ಸಿನಿಮಾ–ಧಾರಾವಾಹಿ ನಿರ್ದೇಶಕರಿಗೆ ಇರುವ ಸವಾಲುಗಳೇನು?**

ಧಾರಾವಾಹಿಯಲ್ಲಿ ಭರವಸೆ ಇರುತ್ತದೆ. ನಮ್ಮ ಹೂಡಿಕೆಗೆ ಯಾವುದೇ ಮೋಸ ಇರಲ್ಲ. ಸಿನಿಮಾ ಆರ್ಥಿಕವಾಗಿ ತುಂಬ ಸವಾಲು. ಅದರಲ್ಲಿ ಎಲ್ಲದೂ ಹೊಸತು. ಪರೀಕ್ಷೆ ಇದ್ದ ಹಾಗೆ. ಚೆನ್ನಾಗಿ ಬರೆಯದಿದ್ದರೆ ಜನ ಉಗಿಯುತ್ತಾರೆ. ಧಾರಾವಾಹಿಯನ್ನು ಉಚಿತವಾಗಿ ನೋಡುತ್ತಿದ್ದೇವೆ ಎಂದು ವೀಕ್ಷಕರಿಗೆ ಅನ್ನಿಸುತ್ತದೆ. ಅದೇ ಅವರು ಒಂದು ಕಂತಿಗೆ ಐದು ರೂಪಾಯಿ ಕೊಡಬೇಕು ಎಂದರೆ ಅಲ್ಲೂ ಉಗಿಯುತ್ತಾರೆ ಎಂದು ನನಗೆ ಅನ್ನಿಸುತ್ತದೆ. ಅದು ಫ್ರೀ ಅನ್ನಿಸಿದ್ದರಿಂದ ಅವರ ಮನೆಯಲ್ಲಿ ಹಾಲು ಉಕ್ಕುತ್ತಿದ್ದರೂ ಮೈಮರೆತು ಟೀವಿ ನೋಡುತ್ತಿರುತ್ತಾರೆ. ಅಂದರೆ ಸೀರಿಯಲ್‌ನ ಜೊತೆ ವೀಕ್ಷಕರು ಬೆರೆತಿರುತ್ತಾರೆ. ಅದರಲ್ಲಿ ಅವರೂ ಒಂದಾಗಬಯಸುತ್ತಾರೆ. ಆದರೆ ನಿರ್ಮಾಣ ಸಿನಿಮಾದಷ್ಟು ಕಷ್ಟ ಅಲ್ಲ.

■ **ರಾಘವೇಂದ್ರ ಕೆ.**